**1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಚಿಕ್ಕಮಗಳೂರು**

ಸತ್ರ ಮೊಕದ್ದಮೆ ನಂಃ **154/2023**

| | | |
|---|---|---|
| ಸಾಕ್ಷಿದಾರರ ಹೆಸರು | - ಸೈಯದ್ ಆಲಿ | ಪಿಡಬ್ಲೂ - 01 |
| ತಂದೆಯ ಹೆಸರು | - ಸೈಯದ್ ಮುನೀರ್ | ಸಿಡಬ್ಲೂ - 01 |
| ವಯಸ್ಸು | - 39 ವರ್ಷ | |
| ಉದ್ಯೋಗ | - ವ್ಯಾಪಾರ | |
| ವಾಸ ಸ್ಥಳ | - ಹಳೇಬೀಡು | |

(ಆರೋಪಿಯು ನ್ಯಾಯಾಂಗ ಬಂದನದಲ್ಲಿದ್ದು, ಆತನನ್ನು ಈ ದಿನ ***Jitsi App*** ನಲ್ಲಿ ವೀಡಿಯೋ ಕಾನ್ಫರೆನ್ಸಿಂಗ್ ಮುಖಾಂತರ ಕಾರಾಗೃಹದಿಂದ ಹಾಜರುಪಡಿಸಲಾಗಿರುತ್ತದೆ. ಸಾಕ್ಷಿಯ ವಿಚಾರಣೆಯನ್ನು ದಾಖಲಿಸುವ ಮೊದಲು ಆರೋಪಿಗೆ ಸಾಕ್ಷಿ ಮಾತನಾಡುವುದು ಸರಿಯಾಗಿ ಕೇಳಿಸುತ್ತಿದೆ ಎಂದು ಖಾತ್ರಿಪಡಿಸಿಕೊಳ್ಳಲಾಯಿತು.)

ದಿನಾಂಕಃ 21-06-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಮುಖ್ಯ ವಿಚಾರಣೆ : ಸರ್ಕಾರಿ ಅಭಿಯೋಜಕರಿಂದ-

1. ಮೃತ ಶಮಾಬಾನು ನನ್ನ ತಂಗಿ. ಈ ದಿನ ವೀಡಿಯೋ ಕಾನ್ಫರೆನ್ಸಿಂಗ್ ಮುಖಾಂತರ ಹಾಜರುಪಡಿಸಿದ ಆರೋಪಿ ಮೃತಳ ಗಂಡ. ಚಾಸಾ.6 ನನ್ನ ಹೆಂಡತಿ. ಚಾಸಾ.9 ನನ್ನ ಚಿಕ್ಕಮ್ಮ. ಚಾಸಾ.10 ನನ್ನ ಸಂಬಂಧಿ. ಚಾಸಾ.11 ಮತ್ತು 13 ರವರು ಮೃತಳ ಮೊದಲನೇ ಗಂಡನ ತಂಗಿ ಮತ್ತು ತಮ್ಮ. ಚಾಸಾ.14 ನನ್ನ

ತಾಯಿ. ಚಾಸಾ.15 ನನ್ನ ಅಣ್ಣ. ಚಾಸಾ.19 ಮತ್ತು 20 ರವರು ಮೃತಳಿಗೆ ಮೊದಲನೇ ಗಂಡನಿಂದ ಜನಿಸಿದ ಮಕ್ಕಳು. ಚಾಸಾ.2 ರಿಂದ 5 ಗೊತ್ತು.

2. ನಮ್ಮ ತಂದೆತಾಯಿಗೆ ನಾವು 3 ಜನ ಮಕ್ಕಳು, ಅವರೆಂದರೆ ಚಾಸಾ.15 ಸೈಯದ್ ಆದೀಲ್, ನಾನು ಮತ್ತು ಮೃತ ಶಮಾಬಾನು. ಶಮಾಬಾನುಳನ್ನು ಮೊದಲಿಗೆ ಬೆಂಗಳೂರಿನ ವಾಸಿಯಾದ ಖುರಂಪಾಷಾರವರೊಂದಿಗೆ 2006 ನೇ ಇಸವಿಯಲ್ಲಿ ಮದುವೆ ಮಾಡಿಕೊಡಲಾಗಿತ್ತು. ಮೃತಳಿಗೆ ಮೊದಲನೇ ಗಂಡನಿಂದ ಇಬ್ಬರು ಮಕ್ಕಳು ಜನಿಸಿದ್ದರು, ಅವರೆಂದರೆ ಚಾಸಾ.19 ಇರ್ಫಾಸಿಹಂ ಮತ್ತು ಚಾಸಾ.20 ಇಸ್ರಾಫ್ ಝ್ಯುನ್. ಮೃತಳು ತನ್ನ ಮೊದಲನೇ ಗಂಡ ಮತ್ತು ಮಕ್ಕಳೊಂದಿಗೆ ಬೆಂಗಳೂರಿನಲ್ಲಿ ವಾಸವಾಗಿದ್ದಳು. 2020 ನೇ ಇಸವಿಯಲ್ಲಿ ಮೃತಳ ಮೊದಲನೇ ಗಂಡ ಖುರಂಪಾಷಾನು ಕರೋನ ಕಾಯಿಲೆಯಿಂದ ಮೃತಪಟ್ಟನು. ನಂತರ ಮೃತ ಶಮಾಬಾನು ತನ್ನ ಇಬ್ಬರು ಮಕ್ಕಳೊಂದಿಗೆ ಹಾಸನ ಜಿಲ್ಲೆಯ ಜಾವಗಲಿನಲ್ಲಿ ಬಾಡಿಗೆ ಮನೆ ಮಾಡಿಕೊಂಡು ವಾಸವಾಗಿದ್ದಳು.

3. ಮೃತಳ ಮೊದಲನೇ ಗಂಡನ ತಂಗಿಯಾದ ಚಾಸಾ.11 ಶಫೀನಾಬಾನುರವರು ಚಿಕ್ಕಮಗಳೂರಿನ ಆಲ್ದೂರಿನಲ್ಲಿ ವಾಸವಾಗಿದ್ದರು. ಆರೋಪಿ ಚಿಕ್ಕಮಗಳೂರಿನ ವಾಸಿಯಾಗಿದ್ದು, ಆತ ಚಾಸಾ.11 ರವರ ಸಂಬಂಧಿಕ. ಚಾಸಾ.11 ರವರು ನನ್ನನ್ನು ಮತ್ತು ನನ್ನ ತಾಯಿಯನ್ನು ಕುರಿತು ಆರೋಪಿಯ ಬಗ್ಗೆ ತಿಳಿಸಿ ಆತನಿಗೆ ಮದುವೆಯಾಗಿದ್ದು ಆತನ ಹೆಂಡತಿ ಮೃತಪಟ್ಟಿದ್ದಾಳೆ

ಆಕೆಯಿಂದ ಆತನಿಗೆ ಇಬ್ಬರು ಮಕ್ಕಳಿದ್ದಾರೆ, ಶಮಾಬಾನುಗೂ ಸಹ ಇಬ್ಬರು ಮಕ್ಕಳಿದ್ದಾರೆ, ಅವರಿಬ್ಬರೂ ಮದುವೆ ಮಾಡಿಕೊಂಡರೆ ಮಕ್ಕಳಿಗೆ ಬಾಳು ಸಿಗುತ್ತದೆ ಎಂದು ಹೇಳಿ ಶಮಾಬಾನುಗೆ ಆರೋಪಿಯನ್ನು ಮದುವೆ ಮಾಡಿಕೊಳ್ಳುವಂತೆ ಒಪ್ಪಿಸಿ ಎಂದು ನನಗೆ ಮತ್ತು ನನ್ನ ತಾಯಿಗೆ ಹೇಳಿದ್ದರು. ಆಗ ನಾನು ಮತ್ತು ನನ್ನ ತಾಯಿ ಸದರಿ ವಿಚಾರವನ್ನು ಶಮಾಬಾನುಗೆ ತಿಳಿಸಿದ್ದೆವು. ಆಗ ನನ್ನ ತಂಗಿ ನೋಡೋಣ ಎಂದು ಹೇಳಿದ್ದಳು. ನಂತರ ಚಾಸಾ.11 ರವರು ನನ್ನ ತಂಗಿ ಶಮಾಬಾನುಳೊಂದಿಗೆ ಆ ಬಗ್ಗೆ ಮಾತನಾಡಿ ಆಕೆ ಆರೋಪಿಯನ್ನು ಮದುವೆ ಮಾಡಿಕೊಳ್ಳುವಂತೆ ಒಪ್ಪಿಸಿದ್ದಳು. ನಂತರ ನಾವು, ಮೃತಳ ಮೊದಲನೇ ಗಂಡನ ತಂಗಿ ಶಫೀನಾ, ಶಫೀನಾಳ ಗಂಡನಾದ ನೂರ್ ಮೊಹಮದ್ ಇರ್ಫಾನ್, ಮೃತಳ ಮೊದಲನೇ ಗಂಡನ ತಮ್ಮ ತಬ್ರೇಸ್ ಮತ್ತು ಸಂಬಂಧಿಕರು ಸೇರಿ 2023 ನೇ ಇಸವಿಯಲ್ಲಿ ಚಿಕ್ಕಮಗಳೂರಿನ ಮಸೀದಿಯಲ್ಲಿ ಶಮಾಬಾನುರವರ ಮದುವೆಯನ್ನು ಆರೋಪಿಯೊಂದಿಗೆ ಮಾಡಿಕೊಟ್ಟೆವು.

4. ಆರೋಪಿ ನನ್ನ ತಂಗಿಯನ್ನು ಮದುವೆ ಮಾಡಿಕೊಂಡ ಬಳಿಕ ಅವರಿಬ್ಬರೂ ತಮ್ಮ ಮಕ್ಕಳೊಂದಿಗೆ ಚಿಕ್ಕಮಗಳೂರಿನಲ್ಲಿ ವಾಸವಾಗಿದ್ದರು. ಮದುವೆಯಾದ 2 ತಿಂಗಳ ನಂತರ ಆರೋಪಿ ನನ್ನ ತಂಗಿಯ ಮೇಲೆ ಅನುಮಾನಪಟ್ಟು ಆಕೆಯೊಂದಿಗೆ ಜಗಳ ಮಾಡುತ್ತಿದ್ದನು. ಸದರಿ ವಿಚಾರವನ್ನು ನನ್ನ ತಂಗಿ ಶಮಾಬಾನು ನಮಗೆ ತಿಳಿಸಿದಾಗ ನಾನು, ನನ್ನ ತಾಯಿ, ನನ್ನ ಅಣ್ಣ, ನನ್ನ

ಹೆಂಡತಿ ಮತ್ತು ಆರೋಪಿಯ ಕಡೆಯವರು ಸೇರಿ ಆರೋಪಿ ಮತ್ತು ಶಮಾಬಾನುಗೆ ಮಾತನಾಡಿ ಸಮಾಧಾನ ಮಾಡಿ ಬಂದಿದ್ದೆವು. ಆಗ ಸುಮಾರು 2 ತಿಂಗಳವರೆಗೆ ಅವರು ಚೆನ್ನಾಗಿದ್ದರು. ನಂತರ ಪುನಃ ಆರೋಪಿ ನನ್ನ ತಂಗಿಯ ಮೇಲೆ ಅನುಮಾನಪಟ್ಟು ಮತ್ತು ಮಕ್ಕಳನ್ನು ನೋಡಿಕೊಳ್ಳುವ ವಿಚಾರದಲ್ಲಿ ಆಕೆಯೊಂದಿಗೆ ಗಲಾಟೆ ಮಾಡಿ ಹಿಂಸೆ ನೀಡುತ್ತಿದ್ದರಿಂದ ಆಕೆ ತನ್ನ ಮಕ್ಕಳನ್ನು ಕರೆದುಕೊಂಡು ಮೈಸೂರಿನ ಪಿರಿಯಪಟ್ಟಣ ತಾಲ್ಲೂಕು ಹಲಗನಹಳ್ಳಿಯಲ್ಲಿರುವ ನನ್ನ ತಾಯಿಯ ಮನೆಗೆ ಹೋಗಿ ಆಕೆಯೊಂದಿಗೆ ವಾಸವಾಗಿದ್ದಳು.

5. ಆಗ ಆರೋಪಿ ಸಹ ಆಗಾಗ್ಗೆ ಹಲಗನಹಳ್ಳಿಗೆ ಹೋಗಿ ನನ್ನ ತಂಗಿಯೊಂದಿಗೆ 2 ರಿಂದ 3 ದಿನ ಉಳಿದುಕೊಂಡು ಬರುತ್ತಿದ್ದನು. ಅದೇ ರೀತಿ ಆರೋಪಿ ಸುಮಾರು 3 ತಿಂಗಳ ಕಾಲ ಅಲ್ಲಿಗೆ ಆಗಾಗ್ಗೆ ಹೋಗಿ 2 ರಿಂದ 3 ದಿನ ಉಳಿದುಕೊಂಡು ಬರುತ್ತಿದ್ದನು. ನನ್ನ ತಂಗಿ ಮೃತಪಡುವ 20 ದಿನಗಳ ಹಿಂದೆ ಆರೋಪಿ ಆಕೆಯನ್ನು ಗೋವಾಗೆ ಕರೆದುಕೊಂಡು ಹೋಗಿದ್ದನು. ದಿಃ 05-09-2023 ರಂದು ಮಧ್ಯಾಹ್ನ 1.30 ಗಂಟೆ ಸುಮಾರಿಗೆ ಚಿಕ್ಕಮಗಳೂರು ನಗರ ಪೊಲೀಸರು ನನಗೆ ಫೋನ್ ಮಾಡಿ ನಿಮ್ಮ ಬಾವ ಶಬ್ಬೀರ್ ಮೌಸಿನ್ ಠಾಣೆಗೆ ಬಂದು ಆತ ನಿಮ್ಮ ತಂಗಿಯೊಂದಿಗೆ ವಾಸವಾಗಿದ್ದ ಮನೆಯಲ್ಲಿ ಆಕೆಯನ್ನು ಕೊಲೆ ಮಾಡಿ ಮನೆಗೆ ಬೀಗವನ್ನು ಹಾಕಿಕೊಂಡು ಠಾಣೆಗೆ ಬಂದಿದ್ದಾನೆ , ನೀವು ಆತನ ಬಾವ ಎಂದು ಆತನ ತಿಳಿಸಿ

ನಿಮ್ಮ ಮೊಬೈಲ್ ನಂಬರನ್ನು ಕೊಟ್ಟನು ಎಂದು ಹೇಳಿ ನೀವು ಕೂಡಲೇ ಠಾಣೆಗೆ ಬನ್ನಿ ಎಂದು ನನಗೆ ತಿಳಿಸಿದರು. ಆ ಸಮಯದಲ್ಲಿ ನಾನು ಹಳೇಬೀಡಿನಲ್ಲಿ ಇದ್ದೆನು. ನಾನು ಸದರಿ ವಿಚಾರವನ್ನು ನನ್ನ ತಾಯಿ, ಅಣ್ಣ ಮತ್ತು ಇತರರಿಗೆ ತಿಳಿಸಿ ಕೂಡಲೇ ನನ್ನ ಹೆಂಡತಿ ಮತ್ತು ನನ್ನ ಸ್ನೇಹಿತರನ್ನು ಕರೆದುಕೊಂಡು ಹಳೇಬೀಡಿನಿಂದ ಹೊರಟು ಚಿಕ್ಕಮಗಳೂರು ನಗರ ಪೊಲೀಸ್ ಠಾಣೆಗೆ ಬಂದೆವು. ಆಗ ಸಮಯ ಸಂಜೆ 4 ಗಂಟೆಯಾಗಿತ್ತು. ಸದರಿ ಠಾಣೆಯಲ್ಲಿ ಆರೋಪಿ ಇದ್ದನು. ಪೊಲೀಸರು ಆರೋಪಿ ಮೇಲೆ ಹೇಳಿದಂತೆ ತಿಳಿಸಿದ್ದ ವಿಚಾರವನ್ನು ನನಗೆ ಪುನಃ ಹೇಳಿ ಆರೋಪಿಯ ಬಳಿಯಿದ್ದ ಮನೆಯ ಕೀಯನ್ನು ಪೊಲೀಸರು ಪಡೆದುಕೊಂಡು ನನಗೆ ಕೊಟ್ಟರು.

6. ನಂತರ ನಾನು ಪೊಲೀಸರನ್ನು ಆರೋಪಿ ನನ್ನ ತಂಗಿಯೊಂದಿಗೆ ವಾಸವಾಗಿದ್ದ ಮನೆಯ ಬಳಿ ಕರೆದುಕೊಂಡು ಹೋದೆನು. ಆಗ ಸಮಯ ಸಂಜೆ 4.45 ಗಂಟೆಯಾಗಿತ್ತು. ನಾನು ಮನೆಯ ಬೀಗವನ್ನು ತೆಗೆದೆನು. ನಾನು ಮತ್ತು ಪೊಲೀಸರು ಮನೆಯೊಳಗೆ ಹೋಗಿ ನೋಡಿದಾಗ ಮನೆಯ ಬೆಡ್ ರೂಮಿನಲ್ಲಿದ್ದ ಬೆಡ್ ಮೇಲೆ ನನ್ನ ತಂಗಿ ಕೊಲೆಯಾಗಿ ಬಿದ್ದಿದ್ದಳು. ಆಕೆಯ ದೇಹದ ಮೇಲೆ ಬೆಡ್‌ಶೀಟ್ ಇತ್ತು. ಆಕೆಯ ಶವ ಬಿದ್ದಿದ್ದ ಹಾಸಿಗೆ, ಅದರ ಮೇಲೆ ಇದ್ದ ಬೆಡ್‌ಶೀಟ್, ದಿಂಬು ಮತ್ತು ಬೆಡ್ ರೂಮಿನ ಗೋಡೆಗಳ ಮೇಲೆ ರಕ್ತದ ಕಲೆಯಾಗಿರುವುದು ಕಂಡುಬಂತು. ಆಕೆಯ ಮುಖವನ್ನು

ಬೆಡಶೀಟಿನಿಂದ ಮುಚ್ಚಲಾಗಿತ್ತು. ಸದರಿ ಬೆಡಶೀಟ್‌ನ್ನು ತೆಗೆದು ನೋಡಿದಾಗ ನನ್ನ ತಂಗಿಯ ತಲೆಯ ಭಾಗ ಮತ್ತು ಮುಖದ ಮೇಲೆ ತೀವ್ರ ರಕ್ತಗಾಯವಾಗಿದ್ದು ಕಂಡುಬಂತು. ಆಕೆಯ ಶವದ ಪಕ್ಕದಲ್ಲೇ ಒಂದು ಕಬ್ಬಿಣದ ಸುತ್ತಿಗೆ ಇತ್ತು ಮತ್ತು ಒಂದು ಪ್ಲಾಸ್ಟಿಕ್ ವೈರ್ ಇತ್ತು. ಆರೋಪಿ ಸದರಿ ಸುತ್ತಿಗೆಯಿಂದ ನನ್ನ ತಂಗಿಯ ತಲೆ ಮತ್ತು ಇತರೆ ಭಾಗಗಳಿಗೆ ಹೊಡೆದು ರಕ್ತಗಾಯ ಪಡಿಸಿ ಕೊಲೆ ಮಾಡಿರುವುದು ಗೊತ್ತಾಯಿತು.

7. ನಂತರ ನಾನು ಸಂಜೆ 5.45 ಗಂಟೆಗೆ ಚಿಕ್ಕಮಗಳೂರು ನಗರ ಪೊಲೀಸ್ ಠಾಣೆಗೆ ಹೋಗಿ ಆರೋಪಿಯ ವಿರುದ್ಧ ಕ್ರಮ ಜರುಗಿಸುವಂತೆ ದೂರನ್ನು ಕೊಟ್ಟೆನು. ಸದರಿ ದೂರನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ದೂರು ಮತ್ತು ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ ದೂರನ್ನು ನಿ.ಪಿ.1 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ.1(ಎ) ಎಂದು ಗುರುತಿಸಲಾಯಿತು. ಸಾಕ್ಷಿಗೆ ಪ್ರಥಮ ವರ್ತಮಾನ ವರದಿಯನ್ನು ತೋರಿಸಲಾಗಿ ಅದರ ಕಲಂ.12 ರಲ್ಲಿ ಇರುವ ತನ್ನ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ ಸದರಿ ವರದಿಯನ್ನು ನಿ.ಪಿ.2 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ.2(ಎ) ಎಂದು ಗುರುತಿಸಲಾಯಿತು.

8. ದೂರು ಕೊಟ್ಟ ನಂತರ ಅದೇ ದಿನ ಪೊಲೀಸರು ಮಹಜರ ಜರುಗಿಸಲು ಸಂಜೆ 6 ಗಂಟೆಗೆ ಘಟನಾ ಸ್ಥಳಕ್ಕೆ ಬಂದಿದ್ದರು. ಆಗ ನಾನು ಅಲ್ಲಿ ಹಾಜರಿದ್ದೆನು ಮತ್ತು ನನ್ನೊಂದಿಗೆ ಚಾಸಾ-2 ಇಮ್ತಿಯಾಜ್ ಮತ್ತು ಚಾಸಾ-3 ರಫೀಕ್‌ರವರು ಇದ್ದರು. ಅವರ

ಸಮಕ್ಷಮ ನಾನು ಪೊಲೀಸರಿಗೆ ಕೃತ್ಯ ನಡೆದ ಸ್ಥಳವನ್ನು ತೋರಿಸಿದೆನು. ಅಲ್ಲಿ ಪೊಲೀಸರು ಮಹಜರನ್ನು ಮಾಡಿಕೊಂಡರು. ಆ ಸಮಯದಲ್ಲಿ ಪೊಲೀಸರು ನನ್ನ ತಂಗಿಯ ಶವದ ಪಕ್ಕದಲ್ಲಿದ್ದ ಕಬ್ಬಿಣದ ಸುತ್ತಿಗೆ, ಪ್ಲಾಸ್ಟಿಕ್ ಕೇಬಲ್ ವೈರ್, ಒಂದು ಕೆಂಪು ಬಣ್ಣದ ದಿಂಬು, ಒಂದು ದಿಂಬಿನ ಕವರ್, ಒಂದು ಬೆಡ್‌ಶೀಟ್ ಗಳನ್ನು ತಮ್ಮ ವಶಕ್ಕೆ ತೆಗೆದುಕೊಂಡರು. ಅವುಗಳಿಗೆ ನನ್ನ ತಂಗಿಯ ರಕ್ತದ ಕಲೆಗಳು ಆಗಿದ್ದವು. ಆ ಸಮಯದಲ್ಲಿ ನೆಲದ ಮೇಲಿದ್ದ ರಕ್ತವನ್ನು ಪೊಲೀಸರು ಹತ್ತಿಯಿಂದ ಒರೆಸಿ ತೆಗೆದುಕೊಂಡರು ಮತ್ತು ನೆಲದ ಮೇಲೆ ರಕ್ತವಿಲ್ಲದ ಸ್ಥಳದಲ್ಲಿ ಒಂದು ಸಾದಾ ಹತ್ತಿಯಿಂದ ಒರೆಸಿ ಅದನ್ನು ತಮ್ಮ ವಶಕ್ಕೆ ತೆಗೆದುಕೊಂಡರು. ಗೋಡೆಯ ಮೇಲಿದ್ದ ರಕ್ತದ ಕಲೆಗಳನ್ನು ಚಾಕುವಿನಿಂದ ಕೆರೆದು ಸಂಗ್ರಹಿಸಿ ತಮ್ಮ ವಶಕ್ಕೆ ತೆಗೆದುಕೊಂಡರು. ಗೋಡೆಯ ಮೇಲೆ ರಕ್ತವಿಲ್ಲದ ಸ್ಥಳದಲ್ಲಿ ಸಹ ಗೋಡೆಯ ಕಣಗಳನ್ನು ಚಾಕುವಿನಿಂದ ಕೆರೆದು ಸಂಗ್ರಹಿಸಿ ತಮ್ಮ ವಶಕ್ಕೆ ತೆಗೆದುಕೊಂಡರು. ಮೇಲೆ ಹೇಳಿದ ಎಲ್ಲಾ ವಸ್ತುಗಳನ್ನು ಪ್ರತ್ಯೇಕವಾಗಿ ಪ್ಯಾಕ್ ಮಾಡಿ ಪೊಲೀಸರು ತಮ್ಮ ವಶಕ್ಕೆ ತೆಗೆದುಕೊಂಡರು. ಆ ಬಗ್ಗೆ ಪೊಲೀಸರು ಸಂಜೆ 6 ಗಂಟೆಯಿಂದ ರಾತ್ರಿ 8 ಗಂಟೆಯವರೆಗೆ ಮಹಜರನ್ನು ಬರೆದುಕೊಂಡಿದ್ದರು. ಸದರಿ ಮಹಜರನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಮಹಜರ್ ಮತ್ತು ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ ಮಹಜರನ್ನು  ನಿ.ಪಿ.3 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ.3(ಎ) ಎಂದು ಗುರುತಿಸಲಾಯಿತು.  ಸದರಿ

ಮಹಜರಿಗೆ ನಾನು, ಚಾಸಾ-2 ಮತ್ತು 3 ರವರು ಸಹಿ ಮಾಡಿದ್ದೇವೆ. ಮೇಲೆ ಹೇಳಿದ ವಸ್ತುಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ನೋಡಿ ಗುರುತಿಸಿದ ಮೇರೆಗೆ ಒಂದು ಕಬ್ಬಿಣದ ಹಿಡಿಯಿರುವ ಸುತ್ತಿಗೆಯನ್ನು ಮು.ಮಾ.1 ಎಂದು, ಒಂದು ಕಪ್ಪು ಬಣ್ಣದ ಕೇಬಲ್ ವೈರನ್ನು ಮು.ಮಾ.2 ಎಂದು, ಒಂದು ಕೆಂಪು ಬಣ್ಣದ ಸ್ಪಂಜಿನ ದಿಂಬನ್ನು ಮು.ಮಾ.3 ಎಂದು, ಕ್ರೀಂ ಬಣ್ಣದ ನೇರಳೆ ಬಣ್ಣದ ಹೂವುಗಳ ಡಿಸೈನ್ ಇರುವ ಒಂದು ದಿಂಬಿನ ಕವರನ್ನು ಮು.ಮಾ.4 ಎಂದು, ಕ್ರೀಂ ಬಣ್ಣದ ನೇರಳೆ ಬಣ್ಣದ ಹೂವುಗಳ ಡಿಸೈನ್ ಇರುವ ಒಂದು ಬೆಡ್‌ಶೀಟ್‌ನ್ನು ಮು.ಮಾ.5 ಎಂದು ಗುರುತಿಸಲಾಯಿತು. ಸಾಕ್ಷಿ ನೋಡಿ ಗುರುತಿಸಿದ ಮೇರೆಗೆ ಖಾಕಿ ಬಣ್ಣದ ಕವರಿನಲ್ಲಿದ್ದ ಒಂದು ಸಾದಾ ಹತ್ತಿಯ ತುಂಡನ್ನು ಮು.ಮಾ.6 ಎಂದು ಗುರುತಿಸಲಾಯಿತು. ಸಾಕ್ಷಿಯು ನೋಡಿ ಗುರುತಿಸಿದ ಮೇರೆಗೆ ನೆಲದ ಮೇಲಿದ್ದ ರಕ್ತದ ಕಲೆಗಳನ್ನು ಒರೆಸಿ ಸಂಗ್ರಹಿಸಿದ ಹತ್ತಿಯ ತುಂಡನ್ನು ಮು.ಮಾ.7 ಎಂದು ಗುರುತಿಸಲಾಯಿತು. ರಕ್ತವಿರದ ಸ್ಥಳದಲ್ಲಿ ಕೆರೆದ ಗೋಡೆಯ ಅಂಶಗಳನ್ನು ಸಾಕ್ಷಿ ನೋಡಿ ಗುರುತಿಸಿದ ಮೇರೆಗೆ ಅವುಗಳನ್ನು ಮು.ಮಾ.8 ಎಂದು ಗುರುತಿಸಲಾಯಿತು. ಸಾಕ್ಷಿಯು ನೋಡಿ ಗುರುತಿಸಿದ ಮೇರೆಗೆ ಒಂದು ಖಾಕಿ ಬಣ್ಣದ ಕವರಿನಲ್ಲಿದ್ದ ಗೋಡೆಯ ಮೇಲಿದ್ದ ರಕ್ತದ ಕಲೆಗಳನ್ನು ಕೆರೆದು ಸಂಗ್ರಹಿಸಿದ ಗೋಡೆಯ ಅಂಶಗಳನ್ನು ಮು.ಮಾ.9 ಎಂದು ಗುರುತಿಸಲಾಯಿತು. ಸಾಕ್ಷಿಯು ಮು.ಮಾ.1 ರಿಂದ ಮು.ಮಾ.9 ರ ಮೇಲೆ ಅಂಟಿಸಲಾಗಿರುವ

ಚೀಟಿಗಳಲ್ಲಿರುವ ತನ್ನ ಸಹಿಗಳನ್ನು ನೋಡಿ ಗುರುತಿಸಿದ ಮೇರೆಗೆ ಅವುಗಳನ್ನು ಮು.ಮಾ.1(ಎ) ರಿಂದ ಮು.ಮಾ.9(ಎ) ಎಂದು ಗುರುತಿಸಲಾಯಿತು. ಸದರಿ ಚೀಟಿಗಳಿಗೆ ನನ್ನೊಂದಿಗೆ ಚಾಸಾ.2 ಮತ್ತು 3 ರವರು ಸಹಿ ಮಾಡಿದ್ದಾರೆ.

(ಈ ದಿನ ಗುರುತಿಸಲ್ಪಟ್ಟ ಮುದ್ದೆ ಮಾಲು 1 ನ್ನು ಪ್ಯಾಕ್ ಮಾಡಿ MCH ಎಂದು ಸೀಲ್ ಮಾಡಿರುವುದು ಕಂಡುಬಂತು. ಮುದ್ದೆ ಮಾಲು 2 ರಿಂದ 9 ವಸ್ತುಗಳನ್ನು ಪ್ಯಾಕ್ ಮಾಡಲಾಗಿದ್ದು ಅವುಗಳ ಮೇಲೆ ಎಫ್ ಎಸ್ ಎಲ್ ಸೀಲು ಇರುವುದು ಕಂಡು ಬಂತು. ಸದರಿ ವಸ್ತುಗಳನ್ನು ಸಾಕ್ಷಿಯಿಂದ ಗುರುತಿಸುವ ಸಲುವಾಗಿ ಈ ದಿನ ತೆರೆದ ನ್ಯಾಯಾಲಯದಲ್ಲಿ ಆರೋಪಿ, ಆತನ ಪರ ವಕೀಲರು ಮತ್ತು ಸರ್ಕಾರಿ ಅಭಿಯೋಜಕರ ಸಮಕ್ಷಮ ತೆರೆದು ಸಾಕ್ಷಿಗೆ ತೋರಿಸಲಾಗಿರುತ್ತದೆ.)

9. ಮಹಜರ್ ಸಮಯದಲ್ಲಿ ಪೊಲೀಸರು ಫೋಟೋಗಳನ್ನು ತೆಗೆದುಕೊಂಡರು. ಸಾಕ್ಷಿಗೆ 5 ಫೋಟೋಗಳನ್ನು ತೋರಿಸಲಾಗಿ, ಅವುಗಳನ್ನು ಮೇಲೆ ಹೇಳಿದಂತೆ ಘಟನಾ ಸ್ಥಳದಲ್ಲಿ ಪೊಲೀಸರು ಮಹಜರ್ ಜರುಗಿಸಿದ ಸಮಯದಲ್ಲಿ ತೆಗೆದಿದ್ದಾಗಿ ನುಡಿದಿರುತ್ತಾರೆ. ಸದರಿ ಫೋಟೋಗಳನ್ನು ನಿ.ಪಿ.4 ರಿಂದ ಪಿ.8 ಎಂದು ಗುರುತಿಸಲಾಯಿತು. ಅವುಗಳ ಪೈಕಿ ನಿಪಿ.8 ರಲ್ಲಿ ತನ್ನ ಇರುವಿಕೆಯನ್ನು ಸಾಕ್ಷಿ ನೋಡಿ ಗುರುತಿಸಿ ಅದರಲ್ಲಿ ತನ್ನೊಂದಿಗೆ ಚಾಸಾ.2, 3 ಮತ್ತು ಪೊಲೀಸರ ಇರುವಿಕೆ ಕಂಡು ಬರುತ್ತದೆ ಎಂದು ನುಡಿದಿರುತ್ತಾರೆ. ಸದರಿ ಫೋಟೋಗಳಲ್ಲಿ ನನ್ನ ತಂಗಿ

ಶಮಾಬಾನುರವರ ಶವ ಇರುವುದು ಮತ್ತು ಆಕೆಗೆ ಆದ ಗಾಯಗಳು ಕಂಡು ಬರುತ್ತವೆ.

10. ಪಂಚನಾಮೆಯನ್ನು ಜರುಗಿಸಿದ ನಂತರ ಪೊಲೀಸರು ನನ್ನ ತಂಗಿಯ ಶವವನ್ನು ಚಿಕ್ಕಮಗಳೂರು ಜಿಲ್ಲಾ ಆಸ್ಪತ್ರೆಯ ಶವಗಾರಕ್ಕೆ ಸಾಗಿಸಿದರು. ಅಲ್ಲಿ ಪೊಲೀಸರು ನನ್ನ ತಂಗಿಯ ಶವ ಪರೀಕ್ಷೆಯನ್ನು ನಡೆಸಿದರು ಮತ್ತು ಆ ಸಮಯದಲ್ಲಿ ಫೋಟೋಗಳನ್ನು ತೆಗೆದುಕೊಂಡರು. ಅದನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಗೆ ಒಂದು ಫೋಟೋವನ್ನು ತೋರಿಸಲಾಗಿ ಅದರಲ್ಲಿ ತನ್ನ ಇರುವಿಕೆಯನ್ನು ಗುರುತಿಸಿ ಅದನ್ನು ಮೇಲೆ ಹೇಳಿದ ಶವಗಾರದಲ್ಲಿ ತೆಗೆದಿದ್ದಾಗಿ ನುಡಿದಿರುತ್ತಾರೆ. ಸದರಿ ಫೋಟೋವನ್ನು ನಿಪಿ.9 ಎಂದು ಗುರುತಿಸಲಾಯಿತು. ಮರಣೋತ್ತರ ಪರೀಕ್ಷೆಯ ನಂತರ ನನ್ನ ತಂಗಿಯ ಶವವನ್ನು ಪೊಲೀಸರು ನನ್ನ ವಶಕ್ಕೆ ಕೊಟ್ಟರು.

11. ಆರೋಪಿ ನನ್ನ ತಂಗಿ ಶಮಾಬಾನುರೊಂದಿಗೆ ಗಲಾಟೆ ಮಾಡಿ ಆಕೆಗೆ ಸುತ್ತಿಗೆಯಿಂದ ಹೊಡೆದು ಕೊಲೆ ಮಾಡಿದ್ದಾನೆ, ಆತನಿಗೆ ಶಿಕ್ಷೆ ಕೊಟ್ಟು ನಮಗೆ ನ್ಯಾಯಾ ಒದಗಿಸಿಕೊಡಿ.

<u>ಪಾಟೀ ಸವಾಲುಃ ಆರೋಪಿಯ ಪರವಾಗಿ ಶ್ರೀ ಪಿ.ಇ.ಎಸ್. ವಕೀಲರಿಂದಃ</u>

12. ಆರೋಪಿ ಮೊದಲಿಗೆ ಸೌದಿ ಅರೇಬಿಯದಲ್ಲಿದ್ದನು ಎಂದರೆ ಸಾಕ್ಷಿ ಆತ ಅಲ್ಲಿ ಇದ್ದ ಬಗ್ಗೆ ಗೊತ್ತಿಲ್ಲ ಆದರೆ ಆತ ಅಲ್ಲಿಂದ ವಾಪಸ್ ಬಂದಿದ್ದಾಗಿ ಕೇಳಿದ್ದೇನೆ ಎನ್ನುತ್ತಾರೆ. ಆರೋಪಿ

ಮೂಲತಃ ಆಲ್ದೂರು ಬಳಿ ಇರುವ ಹವಳ್ಳಿಯ ವಾಸಿ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಆತ ಚಿಕ್ಕಮಗಳೂರಿನಲ್ಲಿಯೇ ವಾಸವಾಗಿದ್ದನು ಎನ್ನುತ್ತಾರೆ. ಆರೋಪಿಗೆ ಚಿಕ್ಕಮಗಳೂರು, ಬೆಂಗಳೂರು ಮತ್ತು ಮೈಸೂರಿನಲ್ಲಿ ನಿವೇಶನಗಳಿವೆ ಮತ್ತು ಆಲ್ದೂರಿನಲ್ಲಿ ತೋಟವಿದೆ ಎಂದರೆ ಸಾಕ್ಷಿ ಮೈಸೂರಿನಲ್ಲಿ ನಿವೇಶನ ಮತ್ತು ಆಲ್ದೂರಿನಲ್ಲಿ ಆತನ ಮತ್ತು ಆತನ ಅಣ್ಣತಮ್ಮಂದಿರಿಗೆ ಸೇರಿದ ತೋಟವಿದೆ ಎಂದು ಗೊತ್ತು ಆದರೆ ಚಿಕ್ಕಮಗಳೂರು ಮತ್ತು ಬೆಂಗಳೂರಿನಲ್ಲಿ ನಿವೇಶನ ಇರುವ ಬಗ್ಗೆ ನನಗೆ ಗೊತ್ತಿಲ್ಲ ಎನ್ನುತ್ತಾರೆ. ಆರೋಪಿಯ ಅಣ್ಣ ಜಾವೀದ್ ರವರು ಎಸ್.ಎಂ.ಕೃಷ್ಣರವರ ಅಳಿಯನಾದ ಸಿದ್ದಾರ್ಥ ಬಳಿ ಒಂದು ಪ್ರಮುಖ ಹುದ್ದೆಯಲ್ಲಿ ಕೆಲಸ ಮಾಡಿಕೊಂಡಿದ್ದರು ಎಂದರೆ ಸರಿ. ಆರೋಪಿಯ ಉಳಿದ ಇಬ್ಬರು ಸಹೋದರರು ದುಬೈ ಮತ್ತು ಸೌದಿ ಅರೇಬಿಯದಲ್ಲಿ ಇಂಜಿನಿಯರ್ ಆಗಿ ಕೆಲಸ ಮಾಡಿಕೊಂಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಸಾಮಾನ್ಯವಾಗಿ ನೀವು ನಿಮ್ಮ ಮನೆಯ ಹೆಣ್ಣು ಮಕ್ಕಳನ್ನು ಮದುವೆ ಮಾಡಿಕೊಡುವ ಸಮಯದಲ್ಲಿ ಹುಡುಗನ ಮನೆತನ ಮತ್ತು ಕುಟುಂಬದ ಹಿನ್ನಲೆಯ ಬಗ್ಗೆ ವಿಚಾರಿಸುತ್ತೀರಿ ಎಂದರೆ ಸರಿ. ಅದೇ ರೀತಿ ನೀವು ನಿಮ್ಮ ತಂಗಿ ಶಮಾಬಾನುರವರನ್ನು ಆರೋಪಿಗೆ ಮದುವೆ ಮಾಡಿಕೊಡುವ ಸಮಯದಲ್ಲಿ ಆತನ ಹಿನ್ನಲೆ ಮತ್ತು ಸಂಪಾದನೆಯ ಬಗ್ಗೆ ವಿಚಾರಿಸಿದ್ದೀರಿ ಎಂದರೆ ಸಾಕ್ಷಿ ಇಬ್ಬರಿಗೂ ಅದು 2 ನೇ ಮದುವೆಯಾಗಿತ್ತು ಹಾಗಾಗಿ ಇಬ್ಬರು ಹೊಂದಿಕೊಂಡು ಮಕ್ಕಳನ್ನು ಚೆನ್ನಾಗಿ ನೋಡಿಕೊಳ್ಳುತ್ತಾರೆ

ಎಂದು ನಂಬಿ ಮದುವೆ ಮಾಡಿಕೊಟ್ಟಿದ್ದೆವು ಎನ್ನುತ್ತಾರೆ. ಆರೋಪಿ ಮಿನಿ ಲಾರಿಯನ್ನು ಹೊಂದಿದ್ದನು ಎಂದರೆ ಸರಿ. ಸದರಿ ಲಾರಿಗೆ ನೀವು ಚಾಲಕರಾಗಿ ಕೆಲಸ ಮಾಡುತ್ತಿದ್ದಿರಿ ಎಂದರೆ ಸರಿಯಲ್ಲ.

13. ನಿಮ್ಮ ತಂಗಿಯ ಮೊದಲನೇ ಗಂಡನ ತಂಗಿಯ ಮೂಲಕ ನಿಮಗೆ ಆರೋಪಿಯ ಪರಿಚಯವಾಯಿತು ಎಂದು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ನೀವು ಆರೋಪಿಯ ಲಾರಿಗೆ ಚಾಲಕನಾಗಿ ಕೆಲಸ ಮಾಡಿಕೊಂಡಿದ್ದು ಆತ ಸ್ಥಿತಿವಂತನು ಎಂದು ನೀವೇ ನಿಮ್ಮ ತಂಗಿಯ ಮದುವೆಯನ್ನು ಆತನೊಂದಿಗೆ ಮಾಡಿಕೊಡಲು ನಿರ್ಧರಿಸಿ ಮುಂದುವರೆದಿದ್ದೀರಿ ಎಂದರೆ ಸರಿಯಲ್ಲ. ಆರೋಪಿ ಸೌದಿ ಅರೆಬೀಯಾದಿಂದ ವಾಪಸ್ ಆದ ಬಳಿಕ 6 ಲಾರಿಗಳನ್ನು ಇಟ್ಟುಕೊಂಡಿದ್ದು ಅವುಗಳ ಪೈಕಿ ಒಂದು ಲಾರಿಗೆ ನೀವು ಚಾಲಕನಾಗಿದ್ದು ಎಲ್ಲಾ ಲಾರಿಗಳನ್ನು ನೀವೇ ನಿರ್ವಹಿಸುತ್ತಿದ್ದಿರಿ ಎಂದರೆ ಸರಿಯಲ್ಲ. ಸದರಿ ನಂಬಿಕೆಯ ಮೇರೆಗೆ ಆರೋಪಿ ನಿಮ್ಮ ತಂಗಿಯನ್ನು ಮದುವೆ ಮಾಡಿಕೊಳ್ಳಲು ಒಪ್ಪಿದ್ದನು ಎಂದರೆ ಸರಿಯಲ್ಲ.

14. ಆರೋಪಿ ಚಿಕ್ಕಮಗಳೂರು ಬಸವನಹಳ್ಳಿ ಪೊಲೀಸರಿಗೆ ನಿಮ್ಮ ತಂಗಿಯ ವಿರುದ್ಧ ದೂರನ್ನು ಕೊಟ್ಟಿದ್ದರು ಎಂದರೆ ಸರಿ. ಸದರಿ ದೂರಿನಲ್ಲಿ ನಿಮ್ಮ ತಂಗಿಗೆ ಬೇರೆ ವ್ಯಕಿಯೊಂದಿಗೆ ಸ್ನೇಹವಿದೆ, ಹಾಗಾಗಿ ಆಕೆಯನ್ನು ಆಕೆಯ ತವರು ಮನೆಯಲ್ಲಿ ಬಿಡುತ್ತಿದ್ದೇನೆ, ಆಕೆಗೆ ಏನಾದರೂ ಆದರೆ ಆಕೆಯೊಂದಿಗೆ ಸ್ನೇಹ ಬೆಳೆಸಿದ ವ್ಯಕ್ತಿಯೇ ಕಾರಣ ಎಂದು ತಿಳಿಸಲಾಗಿದೆ ಎಂದರೆ ಸಾಕ್ಷಿ

ಏನೆಂದು ದೂರು ಕೊಟ್ಟಿದ್ದಾರೆ ಎಂದು ನನಗೆ ಗೊತ್ತಿಲ್ಲ ಎನ್ನುತ್ತಾರೆ. ಆರೋಪಿ ಮತ್ತು ನನ್ನ ತಂಗಿ ಚಿಕ್ಕಮಗಳೂರಿನ ಉಪ್ಪಳ್ಳಿಯಲ್ಲಿ ವಾಸವಾಗಿದ್ದರು ಎಂದರೆ ಸರಿ. ಸದರಿ ಮನೆಯನ್ನು ನೀವು ಪೊಲೀಸರಿಗೆ ತೋರಿಸಿದ್ದಿರಿ ಎಂದರೆ ಸರಿ. ಸದರಿ ಮನೆಯಲ್ಲೇ ಪೊಲೀಸರು ಮಹಜರನ್ನು ಬರೆದರು ಎಂದರೆ ಸರಿ. ಉಪ್ಪಳ್ಳಿಯ ಸದರಿ ಮನೆಯ ಅಕ್ಕಪಕ್ಕದಲ್ಲಿ ಏನೇನು ಇದೆ ಎಂದು ಪೊಲೀಸರು ಆ ದಿನ ಬರೆದುಕೊಂಡಿದ್ದಾರೆ ಎಂದರೆ ಸರಿ. ಸದರಿ ಮನೆಯಲ್ಲಿಯೇ ನಿಮ್ಮ ರುಜುಗಳನ್ನು ಪಡೆದಿದ್ದಾರೆ ಎಂದರೆ ಸರಿ. ಸದರಿ ಮನೆಯಲ್ಲಿಯೇ ನೀವು ಫಿರ್ಯಾದಿಗೆ ಸಹಿ ಮಾಡಿದ್ದಿರಿ ಎಂದರೆ ಸಾಕ್ಷಿ ಚಿಕ್ಕಮಗಳೂರು ನಗರ ಪೊಲೀಸ್ ಠಾಣೆಯಲ್ಲಿ ದೂರು ಕೊಡುವ ಸಮಯದಲ್ಲಿ ಮಾಡಿದ್ದೇನೆ ಎನ್ನುತ್ತಾರೆ.

15. ಬಾಣಾವರದ ಖಲಂದರ್ ಎಂಬುವವರು ನಿಮ್ಮ ಸ್ನೇಹಿತರು ಎಂದರೆ ಸರಿಯಲ್ಲ. ಸದರಿ ಖಲಂದರ್ ಸಹ ಲಾರಿ ಚಾಲಕನಾಗಿ ಕೆಲಸ ಮಾಡಿಕೊಂಡಿದ್ದಾನೆ ಎಂದರೆ ನನಗೆ ಗೊತ್ತಿಲ್ಲ. ಅವರು ನಿಮ್ಮ ಮನೆಗೆ ಆಗಾಗ್ಗೆ ಬರುತ್ತಿದ್ದರು ಎಂದರೆ ಸರಿಯಲ್ಲ. ಅವರು ಜಾವಗಲ್‌ನಲ್ಲಿರುವ ದರ್ಗಾಕ್ಕೆ ಬರುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ಅಲ್ಲಿಗೆ ನಿಮ್ಮ ತಂಗಿಯು ಸಹ ಹೋಗುತ್ತಿದ್ದರು ಎಂದರೆ ಸಾಕ್ಷಿ ನಮ್ಮ ಧರ್ಮದವರೆಲ್ಲರೂ ಸಾಮಾನ್ಯವಾಗಿ ದರ್ಗಾಕ್ಕೆ ಹೋಗುತ್ತೇವೆ ಎನ್ನುತ್ತಾರೆ. ಸದರಿ ದರ್ಗಾದಲ್ಲಿಯೇ ನಿಮ್ಮ ತಂಗಿಗೆ ನೀವು ಮೇಲೆ ಹೇಳಿದ ಖಲಂದರ್ ನನ್ನು ಪರಿಚಯಿಸಿದ್ದಿರಿ ಎಂದರೆ ಸರಿಯಲ್ಲ. ಸಾಕ್ಷಿ

ಮುಂದುವರೆದು ಆತ ಯಾರೆಂದು ನನಗೆ ಗೊತ್ತೇ ಇಲ್ಲ ಎನ್ನುತ್ತಾರೆ. ನಿಮ್ಮ ತಂಗಿಯ ಮೊದಲನೇ ಗಂಡ ಮೃತಪಟ್ಟ ಬಳಿಕ ನಿಮ್ಮ ತಂಗಿ ಮತ್ತು ಸದರಿ ಖಲಂದರ್ ಪರಸ್ಪರ ಪ್ರೀತಿಸುತ್ತಿದ್ದರು ಎಂದರೆ ಸರಿಯಲ್ಲ. ನಿಮ್ಮ ತಂಗಿ ಆತನನ್ನೇ ಮದುವೆ ಮಾಡಿಕೊಳ್ಳುವುದಾಗಿ ನಿಮಗೆ ಹೇಳಿದ್ದಳು ಎಂದರೆ ಸರಿಯಲ್ಲ. ಆದಾದ ಬಳಿಕ ನೀವು ಖಲಂದರ್ ಗೆ ಹೊಡೆದು ನನ್ನ ತಂಗಿಯ ವಿಷಯಕ್ಕೆ ಬರಬೇಡ ಆಕೆಯನ್ನು ತುಂಬಾ ಸ್ಥಿತಿವಂತನಾಗಿರುವ ನನ್ನ ಮಾಲೀಕ ಆರೋಪಿಗೆ ಕೊಟ್ಟು ಮದುವೆ ಮಾಡುತ್ತೇನೆಂದು ಬೆದರಿಸಿದ್ದಿರಿ ಎಂದರೆ ಸಾಕ್ಷಿ ಅದೆಲ್ಲಾ ಸುಳ್ಳು ಎಂದು ನುಡಿದು ಖಲಂದರ್ ಯಾರೆಂದು ನನಗೆ ಗೊತ್ತಿಲ್ಲ ಮತ್ತು ಮೊದಲು ನನಗೆ ಆರೋಪಿಯ ಪರಿಚಯ ಇರಲಿಲ್ಲ ಮತ್ತು ನಾನು ಆತನ ಬಳಿ ಎಂದಿಗೂ ಕೆಲಸ ಮಾಡಿಕೊಂಡಿರಲಿಲ್ಲ ಎನ್ನುತ್ತಾರೆ. ನಿಮ್ಮ ತಂಗಿಯು ಖಲಂದರನನ್ನು ಪ್ರೀತಿಸುತ್ತಿದ್ದ ವಿಚಾರವನ್ನು ಆರೋಪಿಯಿಂದ ಮುಚ್ಚಿಟ್ಟು ಆಕೆಗೆ ಬಲವಂತ ಮಾಡಿ ಆಕೆಯ ಮದುವೆಯನ್ನು ಆರೋಪಿಯೊಂದಿಗೆ ಮಾಡಿಸಿದ್ದಿರಿ ಎಂದರೆ ಸರಿಯಲ್ಲ. ಆರೋಪಿಯನ್ನು ಮದುವೆಯಾದ ಬಳಿಕವು ಸಹ ನಿಮ್ಮ ತಂಗಿ ಖಲಂದರನೊಂದಿಗೆ ಫೋನಿನಲ್ಲಿ ಮಾತನಾಡಿದ್ದು ಮತ್ತು ಮೆಸೇಜ್ ಮಾಡಿರುವುದು ಆರೋಪಿಗೆ ಕಂಡುಬಂತು ಎಂದರೆ ಸರಿಯಲ್ಲ. ಆ ಬಗ್ಗೆ ಆರೋಪಿ ಶಮಾಬಾನುಳನ್ನು ಕೇಳಿದಾಗ ಆಕೆ ನಾನು ಖಲಂದರ್ ನನ್ನು ಬಿಡಲು ಸಿದ್ದಳಿಲ್ಲ, ನಿನಗೆ ಇಷ್ಟವಿದ್ದರೆ ನನ್ನ ಜೊತೆಗೆ ಇರಬಹುದು, ಇಲ್ಲದಿದ್ದರೆ ನಾನು

ಖಲಂದರ್ ನೊಂದಿಗೆ ಹೋಗಿ ವಾಸವಿರುತ್ತೇನೆಂದು ಹೇಳಿದಾಗ ಆರೋಪಿ ಆಕೆಯನ್ನು ಆಕೆಯ ತವರು ಮನೆಗೆ ಕರೆದುಕೊಂಡು ಹೋಗಿ ಬಿಟ್ಟು ಬಂದಿದ್ದಾನೆ ಎಂದರೆ ಸರಿಯಲ್ಲ.

16. ಉಪ್ಪಳ್ಳಿ ಮನೆಯಲ್ಲಿ ಎಷ್ಟು ಗಂಟೆಯವರೆಗೆ ಇದ್ದಿರಿ ಎಂದರೆ ಸಾಕ್ಷಿ ಉಪ್ಪಳ್ಳಿ ಎಂದರೆ ನನಗೆ ಅಷ್ಟಾಗಿ ಗೊತ್ತಾಗುವುದಿಲ್ಲ ಕಾರಣ ನಾನು ವಾಸವಾಗಿರುವುದು ಹಳೇಬೀಡಿನಲ್ಲಿ ಹಾಗಾಗಿ ಚಿಕ್ಕಮಗಳೂರಿನ ಏರಿಯಗಳ ಹೆಸರುಗಳ ಬಗ್ಗೆ ನನಗೆ ಅಷ್ಟಾಗಿ ಮಾಹಿತಿ ಇಲ್ಲ ಎನ್ನುತ್ತಾರೆ. ಆ ದಿನ ನನ್ನ ತಂಗಿ ಕೊಲೆಯಾದ ಮನೆಯಲ್ಲಿ ಸುಮಾರು 3 ಗಂಟೆಗಳ ಕಾಲ ಇದ್ದೆನು ಎನ್ನುತ್ತಾರೆ. ನಿಮ್ಮ ತಂಗಿಯ ಶವವಿದ್ದ ಮನೆಯ ಅಕ್ಕಪಕ್ಕದಲ್ಲಿ ಬೇರೆ ವಾಸದ ಮನೆಗಳು ಇದ್ದವೇ ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. ಅಲ್ಲಿ ಸಾಕಷ್ಟು ವಾಹನಗಳ ಓಡಾಟ ಇರುತ್ತವೆ ಎಂದರೆ ಸಾಕ್ಷಿ ನನ್ನ ತಂಗಿ ಮತ್ತು ಆರೋಪಿ ವಾಸವಾಗಿದ್ದ ಮನೆ ರಸ್ತೆಯ ಕೊನೆಯ ಭಾಗದಲ್ಲಿತ್ತು, ಅಲ್ಲಿಂದ 100 ರಿಂದ 150 ಮೀಟರ್ ದೂರದಲ್ಲಿ ರಸ್ತೆ ಇತ್ತು ಎನ್ನುತ್ತಾರೆ.

17. ನಿಮ್ಮ ತಂಗಿಯ ಶವವಿದ್ದ ಮನೆಯ ಅಕ್ಕಪಕ್ಕದವರು ದಿಃ 05-09-2023 ರಂದು ಬೆಳಿಗ್ಗೆ 5 ಗಂಟೆಗೆ ನಿಮಗೆ ಫೋನ್ ಮಾಡಿ ನಿಮ್ಮ ತಂಗಿ ಮೃತಪಟ್ಟಿರುವ ವಿಚಾರ ತಿಳಿಸಿದ್ದಾರೆ ಹೊರತು ನೀವು ಹೇಳಿದಂತೆ ಪೊಲೀಸರಿಂದ ನಿಮಗೆ ಆ ಬಗ್ಗೆ ಮಾಹಿತಿ ಬಂದಿಲ್ಲ ಎಂದರೆ ಸರಿಯಲ್ಲ.

18. ಆರೋಪಿ ಕೊಟ್ಟ ದೂರಿನ ಮೇರೆಗೆ ನಿಮ್ಮನ್ನು ಮತ್ತು ನಿಮ್ಮ ತಂಗಿಯನ್ನು ಬಸವನಹಳ್ಳಿ ಪೊಲೀಸರು ಠಾಣೆಗೆ ಕರೆಸಿದ್ದರು ಎಂದರೆ ಸರಿಯಲ್ಲ. ಅದರಂತೆ ನೀವು ಸದರಿ ಠಾಣೆಗೆ ಹೋದಾಗ ಆರೋಪಿ ನಿಮ್ಮನ್ನು ಕುರಿತು, ನೀನು ನನ್ನ ಬಳಿ ಚಾಲಕನಾಗಿದ್ದು, ನೀನು ನನಗೆ ಮೋಸ ಮಾಡಿದ್ದಿಯಾ ಎಂದು ಹೇಳಿ ಪೊಲೀಸರ ಮುಂದೆಯೇ ನಿಮ್ಮ ಕೆನ್ನೆಗೆ ಹೊಡೆದಿದ್ದಾನೆ ಎಂದರೆ ಸರಿಯಲ್ಲ. ಆಗ ನಿಮಗೆ ಸಿಟ್ಟು ಬಂದು ನಿನ್ನನ್ನು ನೋಡಿಕೊಳ್ಳುತ್ತೇನೆ ಎಂದು ಪೊಲೀಸರ ಮುಂದೆಯೇ ಆರೋಪಿಗೆ ಎಚ್ಚರಿಕೆ ನೀಡಿದ್ದಿರಿ ಎಂದರೆ ಸರಿಯಲ್ಲ. ಆದಾದ ಬಳಿಕ ನಿಮ್ಮ ತಂಗಿಗೆ ನೀವು ಖಲಂದರ್ ಜೊತೆ ಇರಲು ಅನುವು ಮಾಡಿಕೊಟ್ಟಿದ್ದಿರಿ ಎಂದರೆ ಸರಿಯಲ್ಲ. ಅದರಂತೆ ನಿಮ್ಮ ತಂಗಿ ಮತ್ತು ಖಲಂದರ್ ಒಟ್ಟಿಗೆ ವಾಸವಾಗಿದ್ದರು ಎಂದರೆ ಸರಿಯಲ್ಲ. ಆ ಸಮಯದಲ್ಲಿ ನಿಮ್ಮ ತಂಗಿಯ ಸಾವಾಗಿದ್ದು ಆರೋಪಿ ಹಿಂದೆ ನಿಮ್ಮ ಕೆನ್ನೆಗೆ ಹೊಡೆದಿದ್ದರಿಂದ, ಕೆಲಸದಿಂದ ತೆಗೆದಿದ್ದರಿಂದ ಮತ್ತು ಅವಮಾನ ಮಾಡಿದ್ದರಿಂದ ನೀವು ನಿಮ್ಮ ತಂಗಿಯ ಸಾವನ್ನು ಬಳಸಿಕೊಂಡು ಆರೋಪಿಯ ವಿರುದ್ಧ ಸುಳ್ಳು ಆರೋಪ ಹೊರಿಸಿದ್ದಿರಿ ಎಂದರೆ ಸರಿಯಲ್ಲ. ಮೇಲೆ ಹೇಳಿದ ಖಲಂದರ್ ಎಂಬ ವ್ಯಕ್ತಿ ಹಲವಾರು ಅಪರಾದ ಕೃತ್ಯಗಳಲ್ಲಿ ಮತ್ತು ಕಳ್ಳತನ ಪ್ರಕರಣಗಳಲ್ಲಿ ಭಾಗಿಯಾಗಿದ್ದರಿಂದ ಆತನಿಂದ ಏನಾದರೂ ಅಹಿತಕರ ಘಟನೆಯಾದರೆ ಆತನೇ ಜವಬ್ಧಾರಿ ಎಂದು ಆರೋಪಿ ತನ್ನ ದೂರಿನಲ್ಲಿ ಬರೆದಿದ್ದಾನೆ ಎಂದರೆ ಸರಿಯಲ್ಲ. ಸಾಕ್ಷಿ

ಮುಂದುವರೆದು ಖಲಂದರ್ ಯಾರು ಎಂದು ನನಗೆ ಗೊತ್ತೇ ಇಲ್ಲ ಎನ್ನುತ್ತಾರೆ.

(ಈ ಹಂತದಲ್ಲಿ ಆರೋಪಿ ಪರ ವಕೀಲರು ಸಾಕ್ಷಿಯ ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ ಮೇರೆಗೆ ಮುಂದಿನ ಪಾಟೀ ಸವಾಲನ್ನು ಮುಂದೂಡಲಾಯಿತು.)

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-
(ಭಾನುಮತಿ ಬಿ.ಸಿ)
1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ